# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 239
2. ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 15-02-2024
4. ಉತ್ತರಿಸುವವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮಿಷನ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿ.ಡಿ.ಆರ್) ಕೋರಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; ಇವರಲ್ಲಿ ಎಷ್ಟು ಮಂದಿಗೆ ಟಿ.ಡಿ.ಆರ್ ನೀಡಲಾಗಿದೆ; (ಸಂಪೂರ್ಣ ವಿವರವನ್ನು ಒದಗಿಸುವುದು) | ಮಿಷನ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿ.ಡಿ.ಆರ್) ಕೋರಿ ಶ್ರೀಮತಿ ಸತ್ಯಕುಮಾರಿ, ಶ್ರೀ ಎಂ. ಗೋಪಿ ಮತ್ತು ಶ್ರೀ ಎಸ್.ಪಿ.ಕೃಷ್ಣರಾಜ್ ರವರುಗಳು ಅರ್ಜಿ ಸಲ್ಲಿಸಿರುತ್ತಾರೆ. ಈ ಪೈಕಿ ಶ್ರೀಮತಿ ಸತ್ಯಕುಮಾರಿ ಮತ್ತು ಶ್ರೀ ಎಂ. ಗೋಪಿ ರವರಿಗೆ ಡಿ.ಆರ್.ಸಿ/ಟಿ.ಡಿ.ಆರ್ ನೀಡಲಾಗಿದೆ. ಡಿ.ಆರ್.ಸಿ ಕೋರಿ ಫಾರಂ-4 ಸಲ್ಲಿಸಿರುವ ಶ್ರೀ ಎಸ್.ಪಿ ಕೃಷ್ಣರಾಜ್ ರವರಿಗೆ ಡಿ.ಆರ್.ಸಿ ನೀಡಲು ಫಾರಂ-3 ಅಧಿಸೂಚನೆ ಹೊರಡಿಸಿ ಭೂ ಸ್ವಾಧೀನಗೊಳ್ಳತ್ತಿರುವ ಜಾಗಕ್ಕೆ ಪರಿತ್ಯಾಜ್ಯನಾ ಪತ್ರ ನೋಂದಾಯಿಸಲು ನೀಡಲಾಗಿರುತ್ತದೆ. |
| ಆ | ಈ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಫಾರಂ ನಂ:1 ಅನ್ನು ಎಷ್ಟು ಮಂದಿಗೆ ನೀಡಲಾಗಿದೆ; ಫಾರಂ ನಂ:1 ಅನ್ನು ನೀಡಿದ ವ್ಯಕ್ತಿಗಳಿಗೆ ಟಿ.ಡಿ.ಆರ್ ಅನ್ನು ನೀಡದೆ ವಿಳಂಬ ಧೋರಣೆಯನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶ್ರೀ ಎಸ್.ಪಿ ಕೃಷ್ಣರಾಜ್ ರವರ ಸ್ವತ್ತಿಗೆ ಫಾರಂ-1ನ್ನು ನೀಡಿದ್ದು ಡಿ.ಆರ್.ಸಿ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ವಿಳಂಬ ಧೋರಣೆ ಕಂಡುಬಂದಿರುವುದಿಲ್ಲ. |
| ಇ | ಬಂದಿದ್ದಲ್ಲಿ, ಈ ಸಂಬಂಧ ವಿಳಂಬಕ್ಕೆ ಕಾರಣಕರ್ತರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರವನ್ನು ಒದಗಿಸುವುದು) | ಉದ್ಭವಿಸುವುದಿಲ್ಲ. |

| | | |
|---|---|---|
| ಈ | ಸದರಿ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದ ಮೂಲ ದಾಖಲೆ ಮತ್ತು ಕಡತವು ನಾಪತ್ತೆಯಾಗಿರುವುದರಿಂದ ಭೂ ಮಾಲೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಮಿಷನ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಕಡತಗಳು ಹಾಗೂ ಇನ್ನಿತರ ದಾಖಲಾತಿಗಳು ಕಾಣೆಯಾಗಿರುವುದು ಕಂಡು ಬಂದಿರುವುದಿಲ್ಲ. |
| ಉ | ಸದರಿ ರಸ್ತೆ ಅಗಲೀಕರಣದಲ್ಲಿ ಕೆಲವರಿಗೆ ಟಿ.ಡಿ.ಆರ್ ನೀಡಿ ಕೆಲವರಿಗೆ ಟಿ.ಡಿ.ಆರ್ ನೀಡದೇ ವಿಳಂಬ ನೀತಿಯನ್ನು ಅನುಸರಿಸುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಶಿಸ್ತು ಕ್ರಮಗಳೇನು? (ವಿವರ ನೀಡುವುದು) | ಯಾವುದೇ ವಿಳಂಬ ನೀತಿ ಕಂಡು ಬಂದಿಲ್ಲವಾದ್ದರಿಂದ ಉದ್ಭವಿಸುವುದಿಲ್ಲ. |

**ಸಂಖ್ಯೆ: ನಅಇ 22 ಬಿಬಿಎಲ್ 2024**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ.